ಸಹ ಆ ಜಮೀನು ಅವರ ಸ್ವಾಧೀನಕ್ಕೆ ಬಂದಿಲ್ಲ. ಈಗಲಾದರೂ ಅದನ್ನು ಅವರ ಸ್ವಾಧೀನಕ್ಕೆ ಕೊಡಿಸುತ್ತೀರಾ? ವರಾಹಿ ಜಲ ವಿದ್ಯುತ್ ಯೋಜನೆಯಿಂದ ತೊಂದರೆಯಾದವರಿಗೆ ಜಮೀನನ್ನು ಕೊಡಲು ನನ್ಕ್ಕ ತಾಲ್ಲೂಕಿನಲ್ಲಿ ಜಮೀನು ಇಲ್ಲ, ಅಲ್ಲಿರತಕ್ಕದ್ದೆಲ್ಲ ಅರಣ್ಯ ಪ್ರದೇಶವಾಗಿರುವುದರಿಂದ ಅದನ್ನು ಕೊಡುವುದಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಹ ಅವರಿಗೆಲ್ಲ ಜಮೀನನ್ನು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಈಗ ಏನು ಸ್ಟೇ ಇದೆ ಅದನ್ನು ವೆಕೇಟ್ ಮಾಡಿಸಿ ಕೊನೇ ಪಕ್ಷ ೨ ಸಾವಿರ ಎಕರೆಯನ್ನಾದರೂ ಆ ಜನರಿಗೆ ಕೊಡುವುದಕ್ಕೆ ಮೀಸಲಾಗಿಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ,—ಈಗಾಗಲೇ ನಾವು ಅಡ್ವೊಕೇಟ್ ಜನರಲ್ ಅವರಿಗೆ ಪತ್ರ ಬರೆದು ಸ್ಟೇ ವೆಕೇಟ್ ಮಾಡಿಸಬೇಕೆಂದು ಕೇಳಿಕೊಂಡಿದ್ದೇವೆ. ಆದಷ್ಟು ಜಾಗ್ರತೆ ಸ್ಟೇ ವೆಕೇಟ್ ಮಾಡಿಸಿ ಉಳಿದಂತಹ ಜಮೀನನ್ನು ವರಾಹಿ ಪ್ರಾಜೆಕ್ಟ್‌ನಿಂದ ನೊಂದಂತಹ ಜನರಿಗೆ ಕೊಡತಕ್ಕ ಪ್ರಯತ್ನ ಮಾಡುತ್ತೇನೆ.

Theft of K.S.R.T.C Bus in Gulbarga Depot.

418 SRI QUAMARUL ISLAM. (Gulbarga)—Will the Minister for Transport and Minor Irrigation be pleased to state,—

(a) whether it is a fact that the Karnataka State Road Transport Corporation bus has been stolen in Gulbarga depot on 18-12-1980 bearing No. MYF 6010;

(b) if so, the action taken by the Government in this matter?

SRI M. M. J. SADYOJATHA. (Minister for Transport and Minor Irrigation).—

(a) Yes.

(b) Complaint has been lodged with the police. Vigorous efforts are being made by Police to trace the bus.

ಶ್ರೀ ಭೀಮಣ್ಣ ಖಂಡ್ರೆ.—ಕಳುವಾಗಿರತಕ್ಕ ಬಸ್ಸು ಹಳೆಯದೋ ಅಥವಾ ಹೊಸನೋ ಅದರ ಬೆಲೆ ಎಷ್ಟು? ಅದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಕಂಡುಹಿಡಿದ್ದೀರಾ? ಅದು ಯಾರ ನಿರ್ಲಕ್ಷತೆಯಿಂದ ಹೋಯಿತು ಅದು ರಾತ್ರಿ ಹೊತ್ತು ಕಳುವಾಯಿತೋ ಅಥವಾ ಹಗಲು ಹೊತ್ತು ಕಳುವಾಯಿತೋ ಆ ಸಮಯದಲ್ಲಿ ಯಾರು ಆ ಡಿಪೋದಲ್ಲಿ ಇನ್‌ಚಾರ್ಜ್ ಇದ್ದರು?

†ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ಬಸ್ಸಿನ ಬೆಲೆ ೧೧೨೭೦೬ ರೂಪಾಯಿಗಳು. ಅದು ಯಾರ ನೆಗ್ಲಿಜನ್ಸಿಯಿಂದ ಹೋಯಿತು ಎಂಬ ಮಾಹಿತಿ ಇಲ್ಲ. ಅದು ರಾತ್ರಿ ವೇಳೆ ಕಳುವಾಗಿದೆ. ಮತ್ತು ಆ ಸಂಬಂಧದಲ್ಲಿ ಅಲ್ಲಿದ್ದ ವಾಚ್‌ಮನ್ ಅನ್ನು ಸಸ್ಪೆಂಡ್ ಮಾಡಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಇಲ್ಲಿ ಕದ್ದುಕೊಂಡು ಹೋದ ಬಸ್ಸುಗಳನ್ನು ಹೈದರಾಬಾದ್‌ನಲ್ಲಿ ಬಿಚ್ಚಿ ಮಾರಾಟ ಮಾಡುತ್ತಾರೆ. ಆ ಬಸ್ಸಿನ ೧೨೦ ರೂಪಾಯಿ ಬೆಲೆ ಬಾಳುವ ಸೀಟೊಂದನ್ನು ೬೦ ರೂಪಾಯಿಗೆ ಮಾರಾಟ ಮಾಡಿದಾಗ ಅದು ಕಳ್ಳ ಮಾಲೆಂದು ತಿಳಿದು ಬಂತು. ಆಮೇಲೆ ಅದರ ಮೇಲೆ ನೋಡಿದಾಗ ಕರ್ನಾಟಕ ಸರ್ಕಾರ ಎಂದು ಬರೆದಿತ್ತು. ಈ ಮಾತು ನನಗೆ ಗೊತ್ತಾದ ನಂತರ ಡಿ.ವೈ.ಎಸ್.ಪಿ. ಗೆ ತಿಳಿಸಿ ಇದರ ಬಗ್ಗೆ ಪೂರ್ಣ ಮಾಹಿತಿ ಬೇಕಾದರೆ ಹೇಳುತ್ತೇನೆಂದರೂ ಯಾರೂ ಇದುವರೆಗೆ ನನ್ನ ಹತ್ತಿರ ಬಂದಿಲ್ಲ. ಈ ಪ್ರಕಾರ ತನಿಖೆ ಮಾಡಿದರೆ ಪೋಲೀಸರು ಹೇಗೆ ಕಳ್ಳತನವನ್ನು ಪತ್ತೆ ಮಾಡುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ಈ ಬಗ್ಗೆ ಸರಿಯಾದ ರೀತಿಯಲ್ಲಿ ಬಂದೂಬಸ್ತ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ,—ಮಾನ್ಯ ಸದಸ್ಯರು ಮಾಹಿತಿ ಒದಗಿಸಿದ್ದಾರೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಷೇರ್‌ಖಾನ್. —ಇದು ಗುಲ್ಬರ್ಗ ಡಿಪೋಕ್ಕೆ ಸಂಬಂಧಿಸಿದ ಪ್ರಶ್ನೆ. ವಾಚ್‌ಮ್ಯಾನ್ ಒಬ್ಬ ಸಾಮಾನ್ಯ ಮನುಷ್ಯ. ಅವನಿಗೆ ಆ ಬಸ್ಸು ಇಂಥ ಕಡೆಯೇ ಹೋಗಿದೆ ಎಂಬ ಮಾಹಿತಿ ಗೊತ್ತಿರುವುದಿಲ್ಲ ಅವತ್ತಿನ ದಿವಸ ಆ ಡಿಪೋದಲ್ಲಿ ಇನ್‌ಚಾರ್ಜ್ ಇದ್ದವರ ಬಗ್ಗೆ ಏನು ಮಾಡಿದ್ದೀರಿ?

ಶ್ರೀ ಎಂ.ಎಂ. ಜೆ. ಸದ್ಯೋಜಾತ.—ಇನ್‌ಚಾರ್ಜ್ ಇದ್ದವರಿಗೆ ಏನೂ ಮಾಡಿಲ್ಲ.

ಶ್ರೀ ಷೇರ್‌ಖಾನ್.—ಒಂದು ಬಸ್ ಹೋಯಿತೆಂದು ವಾಚ್‌ಮನ್ ಅನ್ನು ಸಸ್ಪೆಂಡ್ ಮಾಡುವುದು ಯೋಗ್ಯವೆ? ಅಲ್ಲಿನ ಡಿವಿಜನಲ್ ಕಂಟ್ರೋಲರ್ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಇದೇ ತರಹ ಅನೇಕ ಬಸ್ಸುಗಳು ಹೈದರಾಬಾದ್‌ನಲ್ಲಿ ಕೇರಳದಲ್ಲಿ ಮಾರಾಟವಾಗುವುದಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಶ್ರೀ ಎಂ ಎಂ. ಜೆ. ಸದ್ಯೋಜಾತ. —ತನಿಖೆ ನಡೆಸಿ ಯಾರು ತಪ್ಪೆ ತಸ್ಥರೆಂದು ಕಂಡುಬರುತ್ತಾರೊ ಅಂಥವರ ಮೇಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಘಟ್ಟಿ ಚಂದ್ರಶೇಖರ್,—ಕೆ.ಎಸ್.ಆರ್.ಟಿ.ಸಿ. ಯ ಸಾಮಾನುಗಳನ್ನು ಕದಿಯುತ್ತಾರೆಂದು ಇತ್ತ. ಇವತ್ತಿನ ದಿವಸ, ಬಸ್ಸನ್ನೇ ಹೊತ್ತುಕೊಂಡು ಹೋಗಿರುತ್ತಾರೆ. ಅದೇ ರೀತಿ, ನಾಳೆ ದಿವಸ ಮಂತ್ರಿಗಳನ್ನು ಏನಾದರೂ ಕಿಡ್‌ನಾಪ್ ಮಾಡಿದರೆ ಗತಿ ಏನು ಎಂಬ ಭಯ ಉಂಟಾಗಿದೆ. ಈ ಬಗ್ಗೆ ಏನು ರಕ್ಷಣಾ ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಂ.ಎಂ.ಜೆ. ಸದ್ಯೋಜಾತ ನನ್ನ ಬಗ್ಗೆ ಭಯ ಪಡಬೇಕಾಗಿಲ್ಲ.

ಶ್ರೀ ಆರ್ ಅಂಬಣ್ಣನಾಯಕ್.—ಬಸ್ ಕಳೆದುಹೋದ ಬಗ್ಗೆ ಏನೇನು ಕ್ರಮ ಕೈಗೊಂಡಿದ್ದೀರೆಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ.ಎಂ, ಜೆ.—ಸದ್ಯೋಜಾತ, - ಎಲ್ಲಿ ಕ್ರಮಗಳನ್ನು ಕೈಗೊಂಡಿದ್ದೇವೆ, A wireless Message has flashed to the IGPs of the neighbouring States.

ಶ್ರೀ ಭೀಮಣ್ಣ ಖಂಡ್ರೆ.—ಇವತ್ತಿ ದಿವಸ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಎಷ್ಟು ಲಕ್ಷ ರೂಪಾಯಿ ಗಳ ಬಿಡಿ ಭಾಗಗಳು ಕಳವು ಆಗಿವೆ

MR. SPEAKER.—It is a different question.

Hold over Questions from 18th List.

Shortage of Primary School Teachers in North Kanara District.

4 SMT. ANASUYA GAJANANA SHARMA (Ankol)—Will the Minister of State for Primary and Secondary Education, be pleased to state.—

(a) whether it has come to the notice of Government that there is a shortage of Primary School Teachers to the extent of more than 250 in North Kanara district:

(b) since how many years this shortage exists;

(c) the reasons for not taking any action in this regard in spite of the existence of this shortage since a very long time;

(d) when the Government propose to take action to remove this shortage?

SMT NAGAMMA C. KESHAVAMURTHY (Minister of State for Primary and Secondary Education).—

(a Yes.